# ದೇಶದ ಹೊಸ ಕ್ರಿಮಿನಲ್ ಕಾನೂನು: ಜಾಗೃತಿ ಕಾರ್ಯಾಗಾರ




**ಸುರತ್ಕಲ್, ಜು. 1:** ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ಸುರತ್ಕಲ್‌ನಲ್ಲಿ ಸೋಮವಾರ ಭಾರತದಲ್ಲಿ ಹೊಸದಾಗಿ ಜಾರಿಗೆ ಬಂದಿರುವ ಅಪರಾಧ ನ್ಯಾಯ ಸುಧಾರಣೆಗಳ ಕುರಿತು ಜಾಗೃತಿ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಹೆಸರಾಂತ ವಕೀಲ ಪೃಥ್ವಿರಾಜ್ ರೈ ಅವರು ಸುಧಾರಣೆಗಳ ಕುರಿತು ಜಾಗೃತಿ ಮೂಡಿಸಿ, ಭಾರತೀಯ ನ್ಯಾಯ ಸಂಹಿತಾ ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷಿ ಅಧಿನಿಯಮಗಳ ಪ್ರಮುಖ ನಿಬಂಧನೆಗಳ ಬಗ್ಗೆ ಮಾಹಿತಿ ಒದಗಿಸಿದರು. ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್, ಮಹಿಳಾ ಕಲ್ಯಾಣ ವಿಭಾಗದ ಪ್ರಭಾರ ಪ್ರಾಧ್ಯಾಪಕರು, ಅಧ್ಯಾಪಕರು, ಸಿಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Uadayavani, Date:02/07/24, p no - 02